# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ವೈ.ಎಂ ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2222

ಉತ್ತರ ದಿನಾಂಕ : 18.03.202

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಯೇ: ಹಾಗಿದ್ದಲ್ಲಿ, ಅದರ ಉದ್ದೇಶ ಮತ್ತು ಯೋಜನೆಗಳಾವುವು; (ವಿವರಗಳನ್ನು ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಸದರಿ ಯೋಜನೆಯಡಿ 2024ರೊಳಗಾಗಿ ರಾಜ್ಯದ ಎಲ್ಲಾ ಗ್ರಾಮೀಣ ಮನೆಗಳಿಗೆ 55 LPCDಯಂತೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಸಮುದಾಯದ ಸಹಭಾಗಿತ್ವದೊಂದಿಗೆ ಒದಗಿಸುವ ಉದ್ದೇಶ ಹೊಂದಲಾಗಿದೆ.<br>ಈ ಯೋಜನೆಯಡಿ ಸುಸ್ಥಿರ ಜಲಮೂಲದಿಂದ 55 LPCD ನೀರು ಲಭ್ಯವಿರುವಲ್ಲಿ Retrofitting ಕಾಮಗಾರಿಗಳನ್ನು ಹಾಗೂ ನಿಗದಿತ ಪ್ರಮಾಣದ ನೀರು ಲಭ್ಯವಿಲ್ಲದಿದ್ದಲ್ಲಿ Augmentation & Retrofitting ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. |
| ಆ | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಈ ಜಲ ಜೀವನ್ ಮಿಷನ್ ಯೋಜನೆಯ ಅನುಷ್ಠಾನದಲ್ಲಿ ಯಾವ ಯಾವ ಕೆಲಸ/ಕಾರ್ಯಗಳನ್ನು ಮಾಡಲಾಗುತ್ತಿದೆ; (ವಿವರಗಳನ್ನು ನೀಡುವುದು) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಹಾಲಿ ಇರುವ ಹಲವು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯಂತೆ 55 ಎಲ್.ಪಿ.ಸಿ.ಡಿ.ಗೆ ಪುನಃಶ್ಚೇತನಗೊಳಿಸಿ ಜಿಲ್ಲೆಗಳಲ್ಲಿನ ಎಲ್ಲಾ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಒದಗಿಸಲಾಗುತ್ತಿದೆ. |

ಇ) ಬಳ್ಳಾರಿ ಜಿಲ್ಲೆ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಕೆಲಸ ಕಾರ್ಯಗಳನ್ನು ನಡೆಸಲು ನೇಮಿಸಲಾಗಿರುವ ಇಂಜಿನಿಯರ್ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಬಳ್ಳಾರಿ ಜಿಲ್ಲೆ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಕೆಲಸ ಕಾರ್ಯಗಳನ್ನು ನಡೆಸಲು ನೇಮಿಸಲಾಗಿರುವ ಇಂಜಿನಿಯರ್ಗಳ ಸಂಖ್ಯೆಯ ವಿವರ ಈ ಕೆಳಗಿನಂತಿದೆ:

| ಕ್ರ.ಸಂ. | ಕಚೇರಿಯ ಹೆಸರು | ಕಿರಿಯ ಇಂಜಿನಿಯರ್ | ಸಹಾಯಕ ಇಂಜಿನಿಯರ್ |
|---|---|---|---|
| ಬಳ್ಳಾರಿ ಜಿಲ್ಲೆ | | | |
| 1 | ವಿಭಾಗ, ಬಳ್ಳಾರಿ | 2 | - |
| 2 | ಉಪ ವಿಭಾಗ, ಬಳ್ಳಾರಿ | 2 | - |
| 3 | ಉಪ ವಿಭಾಗ, ಸಿರುಗುಪ್ಪ | 2 | - |
| 4 | ಉಪ ವಿಭಾಗ, ಸಂಡೂರು | 1 | 1 |
| ವಿಜಯನಗರ ಜಿಲ್ಲೆ | | | |
| 1 | ವಿಭಾಗ, ಹರಪನಹಳ್ಳಿ | 1 | - |
| 2 | ಉಪ ವಿಭಾಗ, ಹರಪನಹಳ್ಳಿ | - | - |
| 3 | ಉಪ ವಿಭಾಗ, ಹೂವಿನಹಡಗಲಿ | 1 | - |
| 4 | ಉಪ ವಿಭಾಗ, ಕೂಡ್ಲಿಗಿ | 1 | - |
| 5 | ಉಪ ವಿಭಾಗ, ಹಗರಿಬೊಮ್ಮನಹಳ್ಳಿ | 2 | - |
| 6 | ಉಪ ವಿಭಾಗ, ಹೊಸಪೇಟೆ | 2 | 1 |

ಈ) ಮೇಲ್ಕಂಡ ಸದರಿ ಜಿಲ್ಲೆಗಳಲ್ಲಿ ಸಾಕಷ್ಟು ಸಂಖ್ಯೆಯ ಇಂಜಿನಿಯರ್ಗಳು ಮತ್ತು ಸಿಬ್ಬಂದಿಗಳಿಲ್ಲದೆ ಜಲ ಜೀವನ್ ಮಿಷನ್ ಕೆಲಸಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಕೆಲಸಗಳನ್ನು ಚುರುಕುಗೊಳಿಸಲು ಸರ್ಕಾರದ ಯೋಜನೆಗಳೇನು ? (ವಿವರ ನೀಡುವುದು)

ಬಂದಿದೆ.

ಗ್ರಾ.ಕು.ನೀ&ನೈ ಇಲಾಖೆಗೆ ಒಟ್ಟು 492 ಸಹಾಯಕ ಇಂಜಿನಿಯರ್ ಹುದ್ದೆಗಳು ಮತ್ತು 422 ಕಿರಿಯ ಇಂಜಿನಿಯರ್ ಹುದ್ದೆಗಳು ಮಂಜೂರಾಗಿರುತ್ತವೆ. ಮಂಜೂರಾದ ಹುದ್ದೆಗಳ ಪೈಕಿ 382 ಸಹಾಯಕ ಇಂಜಿನಿಯರ್ ಮತ್ತು 166 ಕಿರಿಯ ಇಂಜಿನಿಯರ್ ಹುದ್ದೆಗಳು ಖಾಲಿಯಿದ್ದು, ಖಾಲಿಯಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಸಂ:ಗ್ರಾಕುನೀ&ನೈಇ 180 ಗ್ರಾನೀಸ (4) 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು